

# ಮರಳು ದಿಣ್ಣೆ

■ ಅನು ಬೆಳ್ಳೆ

## ಇನ್ಸ್‌ಪೆಕ್ಟರ್ ಗರಂ

'ಅದು ಹೇಗೆ ಲಹರಿಗೆ ಸಂಬಂಧಪಟ್ಟದ್ದೆಂದು ಸ್ಪಷ್ಟವಾಗಿ ಹೇಳುತ್ತಿರುವೆ? ನೀನು ಅವನನ್ನು ನೋಡಿದ್ದು ಮಾತ್ರ ಅಂದೆ?'

ಪಿಸಿ ತಲೆ ಕೆರೆದುಕೊಂಡ. ವಿಷಯ ಗೌಪ್ಯವಾಗಿಡಬೇಕಾಗಿತ್ತು ಅನಿಸಿತು ಮತ್ತೆ.

'ನೀವು ಮತ್ತು ಪಾಂಬು ಅತ್ತ ಕಡೆ ಹೋದಾಗ ಅವನು ಇಲ್ಲಿ ಕಾಣಿಸಿಕೊಂಡ'

'ಸುಳ್ಳು, ಪಾಂಬು ಈ ವಿಷಯಾನ ನನಗೆ ಹೇಳಲೇ ಇಲ್ಲ'

ಪಿಸಿ ಸಶಬ್ದವಾಗಿ ನಕ್ಕ.

'ಸಾರ್, ನೀವು ಪಾಂಬುವನ್ನು ಕಣ್ಣುಮುಚ್ಚಿ ನಂಬ್ತೀರಿ. ನನ್ನಂತಹ ಪಿಸಿ ಹೇಳಿದ್ರೆ ನೀವು ನಿರಾಕರಿಸ್ತೀರಿ. ಅವನು ಇಲ್ಲೇ ಇದ್ದ. ಪಾಂಬು ನಿಮ್ಮನ್ನ ಸಮುದ್ರದ ನೀರಿನವರೆಗೆ ಕರೆದುಕೊಂಡು ಹೋಗಿ ಅವನು ಓಡಿ ಹೋಗುವುದಕ್ಕೆ ಸಹಾಯ ಮಾಡ್ದ ಅನ್ಸುತ್ತೆ'

'ಪಾಂಬು ನನ್ನ ಜೊತೆಗೆ ಆಟ ಕಟ್ಕೋನಲ್ಲ. ಅವನು ಇವತ್ತು ಸಿಗ್ಲಿಲ್ಲಾಂತ ಹೇಳಿದ್ದ'

'ನೀವು ಅಲ್ಲೇ ಎಡವಿದಿರಿ ಅನ್ಸುತ್ತೆ. ನೀವು ನನಗೆ 'ಬಂಡೆ'ಯ ಹಿಂಬದಿಯಿಂದ ಕತ್ತಲೆಯಲ್ಲಿ ನಡೆದು ಹೋದ ವ್ಯಕ್ತಿಯನ್ನು ತೋರಿಸಿದಿರಲ್ಲವೆ. ಅದೇ ವ್ಯಕ್ತಿ ನಿಮಗೆ ಪಾಂಬು ಹೇಳಿದ ವ್ಯಕ್ತಿಯೂ ಆಗಿರಬಹುದಲ್ಲವೆ?'

'ಅಸಾಧ್ಯ, `ಬಂಡೆ'ಯ ಬಳಿ ಇದ್ದವನು ಪಾಂಬುವೆ. ಅವನು ಆ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದಾನೆ, ಅವನನ್ನು ಭೇಟಿ ಮಾಡಿಸುತ್ತಾನೆ ಅಂದುಕೊಂಡಿದ್ದೆ. ಆದರೆ ನಾವು ಮರಳುದಿಣ್ಣೆಯವರೆಗೆ ಹೋಗುವವರೆಗೂ ಆತ ಕರೆತರದಿದ್ದಾಗ ನನಗೆ ಸಂದೇಹ ಮೂಡಿತು. ಅದಕ್ಕೆ ಹಿಂದಕ್ಕೆ ಹೊರಡೋಣಂತ ಹೊರಟದ್ದಲ್ಲವೆ?'

'ಸಾರ್, ನೀವು ಏನೇ ಹೇಳಿ ಪಾಂಬು ನಿಮಗೆ ಮೋಸ ಮಾಡಿರೋದ್ರಲ್ಲಿ ಸಂದೇಹವಿಲ್ಲ'

ಅಧಿಕಾರಿಗೆ ಪಿಸಿಯ ಮಾತು ರುಚಿಸಲಿಲ್ಲ. ಅನಗತ್ಯ ತನ್ನನ್ನು ಗೊಂದಲಕ್ಕೀಡು ಮಾಡುತ್ತಿದ್ದಾನೆ.

'ಸುಮ್ನೆ ವಿಪರೀತ ಕಲ್ಪನೆಗಳನ್ನು ಮಾಡ್ಬೇಡ. ಪಾಂಬು ಆ ವ್ಯಕ್ತಿಯನ್ನು ಇವತ್ತು ಮರಳು ದಿಣ್ಣೆಯ ಮೇಲೆ ನೋಡಿದ್ದ, ಮಾತಾಡಿದ್ದ ಮತ್ತು ಅವನನ್ನು ಇಲ್ಲಿಗೆ ರಾತ್ರಿ ಬರುವಂತೆ ಹೇಳಿದ್ದ. ಆದ್ರೆ ಆ ವ್ಯಕ್ತಿಯನ್ನು ಇನ್ಯಾರೋ ಹಿಂಬಾಲಿಸುತ್ತಿದ್ದಾರೇಂತ ಗುಮಾನಿಯಾಗಿದೆ. ಅದಕ್ಕೆ ಅವನು ಇಲ್ಲಿಗೆ ಬರುವ ಧೈರ್ಯ ಮಾಡ್ಲಿಲ್ಲಾಂತ ಪಾಂಬುವೇ ನನಗೆ ತಿಳಿಸಿದ'

'ಸಾರ್, ಸುಳ್ಳು. ಆ ವ್ಯಕ್ತಿಯೇ ಪಾಂಬುವಿನ ಕಾರಿನ ಒಳಗಿದ್ದ. ಪಾಂಬು ನಿಮಗೆ ಮೋಸ ಮಾಡ್ದ ಸಾರ್' ತಕ್ಷಣವೇ ಹೇಳಿದ ಪಿಸಿ ಉದ್ವೇಗದಿಂದ.

'ಎಲ್ಲಿ ನೋಡಿದೆ ನೀನು?'

'ಸಾರ್, ನೀವು ಅತ್ತ ಕಡೆ ಹೋದಾಗ ನಾನು ಪಾಂಬುವಿನ ಕಾರಿನತ್ತ ಹೋದೆ. ಒಳಗಡೆ ಆ ವ್ಯಕ್ತಿಯಿದ್ದ ಸಾರ್!'

'ಹೌದೇ? ಸರಿ, ನಾವು ತಡ ಮಾಡೋದು ಬೇಡ. ಅವನನ್ನು ಇವತ್ತು